ನಡೆಯಿತು. ಅಷ್ಟೂ ಚಿತ್ರಗಳನ್ನು ಒಟ್ಟಿಗೆ ನೋಡಿದ ಅನುಭವವೇ ದಶಕಗಳ ನಂತರ 'ದಾರಿ ನೂರಾರುಂಟು ಬೆಳಕಿನರಮನೆಗೆ' ಎಂಬ ಕತೆಯ ರಚನೆಗೆ ಪ್ರೇರಣೆಯಾಗಿರಲಿಕ್ಕೆ ಸಾಕು.

ನಲವತ್ತೈದು ವರ್ಷಗಳ ಹಿಂದೆ ಅನೇಕ ಶಾಸ್ತ್ರೀಯ ಸಂಗೀತಗಾರರ ಸಂಗೀತವನ್ನು ಕೇಳುತ್ತಿದ್ದಾಗ ಒಮ್ಮೆ ನನ್ನೊಳಗೆ ಹುಟ್ಟಿಕೊಂಡ ಪ್ರಶ್ನೆ: ಒಬ್ಬ ಸಂಗೀತಗಾರ ಕಣ್ಣಿಗೆ ಕಾಣದ, ಕಿವಿಗಷ್ಟೇ ವೇದ್ಯವಾಗುವ, ಮೂರ್ತವಲ್ಲದ ರಾಗವೊಂದನ್ನು, ಅದು ಹುಟ್ಟಿದ ತಕ್ಷಣ, ಹಿಡಿದಿಡುವುದು ಹೇಗೆ? ಈ ಪ್ರಶ್ನೆಗೆ ಒಂದು ರೂಪಕಾತ್ಮಕ ಉತ್ತರವನ್ನು ಕಂಡುಕೊಳ್ಳುವುದಕ್ಕಾಗಿ ನಾನು ಮೂವತ್ತಕ್ಕೂ ಹೆಚ್ಚು ವರ್ಷ ಕಾದೆ. ಗೆಳೆಯರೊಬ್ಬರು ಒಂದು ವಿಲಕ್ಷಣ ವ್ಯಕ್ತಿತ್ವವನ್ನು ಕುರಿತು ಕೆಲವು ವಿವರಗಳನ್ನು ನೀಡಿದ್ದೇ ನನ್ನ 'ಪೆಟ್ಟಿಗೆ' ಕತೆ ಹುಟ್ಟಿಕೊಂಡಿತು.

ನಾನು ಮತ್ತೆ ಮತ್ತೆ ಓದುವ ಕತೆಗಾರರು ಮಾಸ್ತಿ, ಚಿತ್ತಾಲ, ತೇಜಸ್ವಿ, ಚೆಕಾಫ್, ಫ್ರಾಂಕ್ ಓ'ಕೋನರ್, ಬೋರ್ಹೆಸ್ ಮತ್ತು ಅಗೂಸ್ತೊ ಮೊಂತೆರ್ರೋಸೊ. ಇವರು ಸಣ್ಣಕತೆಯಲ್ಲಿ ಇದುವರೆಗೆ ಏನೇನೆಲ್ಲ ಸಾಧಿಸಲಾಗಿದೆಯೋ ಅದೆಲ್ಲದರ ಪ್ರತಿನಿಧಿಗಳು. ಹೀಗಿರುವಾಗ ಸಣ್ಣಕತೆಯ ಹೆದ್ದಾರಿಯಲ್ಲಿ ನನ್ನದೇನಾದರೂ ಒಂದು ಹೆಜ್ಜೆಗುರುತುಂಟೆ? ನನಗೆ ಗೊತ್ತಿಲ್ಲ. ನಮ್ಮ ವಿಮರ್ಶಕರಲ್ಲಿ ಕೆಲವರು ನನ್ನನ್ನು ಪ್ರಯೋಗಶೀಲ ಕತೆಗಾರನೆಂದು ಪರಿಗಣಿಸಿರುವುದುಂಟು. ಆದರೆ ನಾನು ಕೇವಲ ಪ್ರಯೋಗಕ್ಕಾಗಿ ಪ್ರಯೋಗ ಮಾಡಿದವನಲ್ಲ. ಎಷ್ಟೋ ಸಲ ಕಥಾವಸ್ತುವೇ ನನ್ನನ್ನು ಹೊಸ ಪ್ರಯೋಗಮಾಡುವಂತೆ ಪ್ರೇರೇಪಿಸಿದ್ದಿದೆ. ಈ ಬಗ್ಗೆ ನನ್ನ 'ಎಲ್ಲ ಬಲ್ಲವರಿಲ್ಲ ಈ ಊರಿನಲ್ಲಿ' ಕಥಾ ಸಂಕಲನವನ್ನು ಕುರಿತು ವಿಮರ್ಶಕ ಜಿ.ಎಸ್. ಆಮೂರರು ಬರೆದದ್ದಿದು: "ರೂಢಿಯಲ್ಲಿದ್ದ ಸಾಹಿತ್ಯದ ಆಕೃತಿಗಳು ಸ್ವಂತದ ಅಭಿವ್ಯಕ್ತಿಗೆ ಅಪರ್ಯಾಪ್ತವೆನಿಸಿದಾಗ ಪ್ರಯೋಗಶೀಲತೆ ಅನಿವಾರ್ಯವಾಗುತ್ತದೆ... ವರ್ತಮಾನದ ಎಲ್ಲ ವಿವರಗಳನ್ನೊಳಗೊಂಡೂ ಅದರಾಚೆಗೆ ಕೈಕಾಲು ಚಾಚುವ (ದಿವಾಕರರ) ರಚನೆಗಳು ವಾಸ್ತವದಿಂದ ಭಿನ್ನವಾದ ಲೋಕವೊಂದನ್ನು ಸೃಷ್ಟಿಸುವುದರ ಮೂಲಕ ತಮ್ಮ ಅಪ್ಪಟ ಸೃಜನಶೀಲತೆಯನ್ನು ಮೆರೆಯುತ್ತವೆ."

ಸಣ್ಣಕತೆಯ ಸಾಧ್ಯತೆಗಳನ್ನು ವಿಸ್ತರಿಸುವ ದಿಕ್ಕಿನಲ್ಲಿ ನನಗೆ ಪೇಂಟಿಂಗ್, ಫೋಟೊ, ನಕಾಶೆ, ಪ್ರಶ್ನೆಪತ್ರಿಕೆ, ಹೀಗೆ ಯಾವುದೂ ನೆರವಾಗಬಹುದು. ಕೆಲವು ವರ್ಷಗಳ ಹಿಂದೆ ನಾನು ಬರೆದ ಒಂದು ಕತೆ ನನಗೇ ತೃಪ್ತಿ ಕೊಡಲಿಲ್ಲ. ಸುಮಾರು ಒಂದು ವರ್ಷವೇ ಆದ ಮೇಲೆ ಅದನ್ನು ಅಲ್ಲಲ್ಲಿ ಬದಲಾಯಿಸಿದರೂ ಸರಿ ಎನ್ನಿಸಲಿಲ್ಲ. ಆಮೇಲೊಂದು ದಿನ, ಯಾಕೆ ಎಂದು ನನಗೇ ಸ್ಪಷ್ಟವಾಗದಿದ್ದರೂ, ಅದರ ಕೊನೆಗೊಂದು ಪ್ರಶ್ನೆಪತ್ರಿಕೆ ಸೇರಿಸಿದೆ. ಈ ಕತೆಯ ಬಗ್ಗೆ ಬರೆಯುತ್ತ ಕೆ.ವಿ. ತಿರುಮಲೇಶ್ ನನ್ನ ತಂತ್ರವನ್ನು ಕತೆಯಿಂದ ಬೇರ್ಪಡಿಸಿ ನೋಡಲಿಲ್ಲವೆಂಬುದು ಬಹು ಮುಖ್ಯ. ಅವರ ಪ್ರಕಾರ, "ಕತೆ ತಾನು ಕತೆಯೋ ಅಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳುವಂತೆ ತನಗೆ ತಾನೇ ದರ್ಪಣವಾಗುವುದೂ ಒಂದು ಕಥಾತಂತ್ರವೇ ಹಾಗೂ ದಿವಾಕರ್ ಅದನ್ನು ಸಾಕಷ್ಟು ಬಳಸಿಕೊಳ್ಳುತ್ತಾರೆ: 'ಮುರುಗಭೂಪತಿಯ ಮಗ: ಒಂದು ಕತೆ ಮತ್ತು ಪ್ರಶ್ನೆಪತ್ರಿಕೆ'ಯಲ್ಲಾದರೆ ಶೀರ್ಷಿಕೆಯಿಂದಲೇ ಈ ಸ್ವಯಂವೀಕ್ಷಣೆ ಮೊದಲಾಗುತ್ತದೆ; ಕತೆಯ ಕೊನೆಯಲ್ಲಿ, ಪಾಠ ಪುಸ್ತಕಗಳಲ್ಲಿರುವಂತೆ, ಕೆಲವು ಪ್ರಶ್ನೆಗಳೂ ಇವೆ! ಇವುಗಳಲ್ಲಿ ಕೆಲವು ಸಂಗತವೆನಿಸಿದರೆ ಇನ್ನು ಕೆಲವು ಅಸಂಗತವೆಂದು ತೋರಬಹುದು. ಆದರೆ ಪಠ್ಯವೊಂದನ್ನು ನಾವು ಇಡಿಯಾಗಿ ಓದಬೇಕಾದ್ದರಿಂದ ಈ ಪ್ರಶ್ನೆಗಳೂ ಕೂಡ ಕತೆಯ ಅಂಗವೇ